**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಓ ಎಸ್ ನಂ**. 160/2018**

ದಿನಾಂಕಃ **29.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಸಂತೋಷ್ ಕುಮಾರ್ | ಸಿಡಬ್ಲೂ-1 |
| ತಂದೆಯ ಹೆಸರುಃ | ಸುಬ್ಬೇಗೌಡ | |
| ವಯಸ್ಸು ಃ | 38 ವರ್ಷ | |
| ಉದ್ಯೋಗ ಃ | ಸರ್ವೆಯರ್ | |
| ವಾಸ ಃ | ಕಡೂರು | |

ಮುಖ್ಯ ವಿಚಾರಣೆಃ

ಈ ನ್ಯಾಯಾಲಯದಿಂದ ದಾವಾ ಎ ಮತ್ತು ಬಿ ಷೆಡ್ಯೂಲ್ ಸ್ವತ್ತನ್ನು ಅಳತೆ ಮಾಡಿ ವರದಿ ಸಲ್ಲಿಸುವಂತೆ ವಾರೆಂಟ್ ಬಂದಿದ್ದು, ಸದರಿ ವಾರೆಂಟಿನಂತೆ ದಿಃ 09.02.2024 ರಂದು ಈ ಪ್ರಕರಣದ ವಾದಿ ಮತ್ತು ಪ್ರತಿವಾದಿ ಮತ್ತು ಖಾತೆದಾರರಿಗೆ ನೊಂದಾಯಿತ ಅಂಚೆ ಮೂಲಕ ನೋಟಿಸನ್ನು ಜಾರಿ ಮಾಡಿ ದಿಃ 16.02.2024 ರಂದು ಸ್ಥಳದಲ್ಲಿ ಹಾಜರಿರುವಂತೆ ತಿಳಿಸಿರುತ್ತೇನೆ. ಅದರಂತೆ ದಿಃ 16.0822024 ರಂದು ದಾವಾ ಸ್ವತ್ತಾದ ದೊಂಬರಹಳ್ಳಿ ಗ್ರಾಮದ ಸರ್ವೆ ನಂ 34ಃ2 ಮತ್ತು 34ಃ4 ಕ್ಕೆ ಭೇಟಿ ನೀಡಿ ಸದರಿ ಸ್ಥಳದಲ್ಲಿ ವಾದಿಯಾದ ಜಯಣ್ಣ ಮತ್ತು ಪ್ರತಿವಾದಿಗಳು ಹಾಜರಿದ್ದರು. ನಂತರ ಸ್ಥಳವನ್ನು ಪರಿಶೀಲಿಸಿ ಅಳತೆ ಮಾಡಿರುತ್ತೇನೆ. ನಂತರ ಕಛೇರಿಯಲ್ಲಿ ನಕಾಶೆಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರು ನೀಡಿರುವ ಪ್ರಶ್ನಾವಳಿಗೆ ಉತ್ತರವನ್ನು ನೀಡಿರುತ್ತೇನೆ. ನನ್ನ ಸರ್ವೆ ಕೆಲಸದಲ್ಲಿ ಸರ್ವೆ ನಂ 34ಃ2 ರ ಖಾತೆದಾರರು 2 ಗುಂಟೆ ಆಸ್ತಿಯನ್ನು ಸರ್ವೆ ನಂ 34ಃ4 ರ ಆಸ್ತಿಯಿಂದ ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ಸಾಕ್ಷಿಯು ವಾರೆಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು, ವಾದಿ ಮತ್ತು ಪ್ರತಿವಾದಿಗಳಿಗೆ ನೀಡಿದ ನೋಟಿಸನ್ನು ನಿಸಿ-2 ಎಂದು, 9 ಅಂಚೆ ರಶೀದಿಗನಳ್ನು ನಿಸಿ-3 ರಿಂದ 11 ಎಂದು, ಸ್ಥಳ ಮಹಜರನ್ನು ನಿಸಿ-12 ಎಂದು, 2 ನಕ್ಷೆಗಳನ್ನು ನಿಸಿ-13 ಮತ್ತು 14 ಎಂದು, ವಾದಿ ಮತ್ತು ಪ್ರತಿವಾದಿಗಳು ನೀಡಿರುವ ಸೂಚನಾವಳಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಸಿ-15 ಮತ್ತು 16 ಎಂದು, ವಾದಿ ಮತ್ತು ಪ್ರತಿವಾದಿಗಳು ನೀಡಿರುವ ಸೂಚನಾವಳಿಗಳಿಗೆ ನೀಡಿರುವ ಉತ್ತರವನ್ನು ನಿಸಿ-17 ಮತ್ತು 18 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಸಮಯಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.